ಮೂಲ ದಾವಾ ನಂ. 101/2018

ಪಿ. ಡಬ್ಲುಃ 1

ಸಾಕ್ಷಿಯನ್ನು ದಿನಾಂಕ: 19-04-2024 ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ ಶ್ರೀ ಕೆ. ಎಸ್. ಬಿ. ವಕೀಲರಿಂದಃ**

ದಾವಾ ಸ್ಥಳ ನನ್ನ ತಂದೆಯ ಸ್ವಂತಾರ್ಜಿತ ಆಸ್ತಿಯಾಗಿತ್ತು ಎಂದರೆ ಸರಿ. ಈ ಮಾಹಿತಿಯನ್ನು ನಾನು ನನ್ನ ವಕೀಲರಿಗೂ ಸಹಾ ನೀಡಿರುತ್ತೇನೆ. ನನ್ನ ತಂದೆ ಜೀವಂತ ಇದ್ದಾಗ ಅವರ ಸ್ವಂತಾರ್ಜಿತ ಆಸ್ತಿಗಳನ್ನು ಅವರ ಮಕ್ಕಳ ಮಧ್ಯೆ ವಿಭಾಗ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ದಾವಾ ದಾಖಲಿಸುವ ಪೂರ್ವದಲ್ಲಿ ದಾವಾ ಆಸ್ತಿಯ ಕುರಿತು ದಾಖಲೆಗಳನ್ನು ನೋಡಿರುತ್ತೇನೆ. ಈ ದಾವೆ ದಾಖಲಿಸುವ ಸಮಯದಲ್ಲಿ ದಾವಾ ಆಸ್ತಿ ನನ್ನ ತಂದೆಯ ಹೆಸರಿನಲ್ಲಿಯೇ ಇತ್ತು. ಆ ಸಮಯದಲ್ಲಿ ದಾವಾ ಆಸ್ತಿ ನನ್ನ ತಂದೆಯ ಹೆಸರಿನಲ್ಲಿ ಇತ್ತು ಎನ್ನುವ ಕುರಿತು ನ್ಯಾಯಾಲಯಕ್ಕೆ ದಾಖಲೆ ನೀಡಿರುತ್ತೇನೆ. ನಾನು ಆ ಬಗ್ಗೆ ಆರ್ ಟಿ ಸಿ ಯನ್ನು ನೀಡಿರುತ್ತೇನೆ. ಸದ್ರಿ ಆರ್. ಟಿ. ಸಿ ಯಲ್ಲಿ ನನ್ನ ತಂದೆಯ ಹೆಸರು ಮಾತ್ರ ಇತ್ತು. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ಸಾಕ್ಷಿಗೆ ತಾನು ಹಾಜರುಪಡಿಸಿದ ನಿಪಿ. 1 ನ್ನು ತೋರಿಸಲಾಗಿ ಅದನ್ನು ನೋಡಿ ಅದರಲ್ಲಿ ಪ್ರತಿವಾದಿಯರು ತಮ್ಮ ಹೆಸರನ್ನು ಸೇರಿಸಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಅದರಲ್ಲಿ ಪ್ರತಿವಾದಿಯರ ಹೆಸರು ಹೇಗೆ ದಾಖಲಾಯಿತು ಎಂದು ನನಗೆ ಗೊತ್ತಿಲ್ಲ. ಆ ಬಗ್ಗೆ ನಾನು ಯಾವದೇ ವಿಚಾರಣೆ ಮಾಡಿರುವುದಿಲ್ಲ. ಆ ಬಗ್ಗೆ ವಿಚಾರಣೆ ಮಾಡಲು ನನಗೆ ತೊಂದರೆ ಇರಲಿಲ್ಲ.

ನನ್ನ ತಂದೆ ಜೀವಂತ ಇರುವಾಗಲೇ ಪ್ರತಿವಾದಿಯರಿಗೆ ತನ್ನ ಸ್ವಂತಾರ್ಜಿತ ಆಸ್ತಿಯಲ್ಲಿ ಹಿಸ್ಸೆ ಮಾಡಿಕೊಟ್ಟಿದ್ದ ಎಂದರೆ ಸರಿಯಲ್ಲ. ಆ ರೀತಿ ಹಿಸ್ಸೆಯಾದ ಬಗ್ಗೆ 1999 ರಲ್ಲಿಯೇ ಮ್ಯುಟೇಷನ್ ಎಂಟ್ರಿಯಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಆ ರೀತಿ ಹಿಸ್ಸೆ ಮಾಡಿದಾಗ ನನ್ನ ತಂದೆ ಕೂಡಾ ಒಂದು ಹಿಸ್ಸೆಯನ್ನು ಪಡೆದಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು 2 ಎಕರೆ 6 ಗುಂಟೆ ಜಾಗದಲ್ಲಿ ಹಿಸ್ಸೆಯನ್ನು ಕೇಳುತ್ತಿದ್ದೇನೆ. ಸದ್ರಿ ಆಸ್ತಿಯ ಕುರಿತು ನನ್ನ ದಾವೆ ನಡೆಯುವುದಿಲ್ಲ ಎಂದರೆ ಸರಿಯಲ್ಲ. ಸದ್ರಿ ಆಸ್ತಿ ನನ್ನ ತಂದೆಯ ಸ್ವಂತಾರ್ಜಿತ ಆಸ್ತಿಯಾಗಿದ್ದು ಅದನ್ನು ಈಗಾಗಲೇ ಹಿಸ್ಸೆ ಮಾಡಿದ್ದು ಆದ್ದರಿಂದ ನನಗೆ ಅದರಲ್ಲಿ ಯಾವದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

ನನ್ನ ತಂದೆ 15.05.2010 ರಂದು ಮೃತಪಟ್ಟಿದ್ದು ನಾನು ಅವರನ್ನು ಕೊನೆಯ ಬಾರಿಗೆ 13.05.2010 ರಂದು ನೋಡಿರುತ್ತೇನೆ. ನನ್ನ ತಂದೆ ಮೃತಪಡುವ ಸಮಯದಲ್ಲಿ ಪ್ರತಿವಾದಿಯರು ಬೇರೆ ಬೇರೆಯಾಗಿ ವಾಸಮಾಡುತ್ತಿದ್ದರು. ಪ್ರತಿವಾದಿಯರು ಪ್ರತ್ಯೇಕ ಮನೆಗಳನ್ನು ಕಟ್ಟಿಕೊಂಡು ವಾಸಮಾಡುತ್ತಿದ್ದರು. ಸಾಕ್ಷಿ ಮುಂದುವರಿದು ನನ್ನ ತಂದೆ ಕೂಡಾ ಪ್ರತ್ಯೇಕ ಮನೆಯಲ್ಲಿ ವಾಸವಾಗಿದ್ದರು ಎಂದು ನುಡಿಯುತ್ತಾರೆ. ನನ್ನ ತಂದೆ ವಾಸವಿದ್ದ ಮನೆಯ ಸಂಖ್ಯೆ ಹೇಳಲು ಆಗುವುದಿಲ್ಲ.

(ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ವಕೀಲರು ಸಮಯ ಕೇಳಿದ್ದು ಸಮಯ ನೀಡಲಾಯಿತು )

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

Sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು, ಹೊನ್ನಾವರ.